## ಉತ್ತಮ ಕಥೆ

‘ಕದಡಿದ ರಂಗು’ (ವಸುಂಧರಾ ಕದಲೂರು, ಡಿ. 2) ಕಥೆ ಚೆನ್ನಾಗಿದೆ. ತಮ್ಮ ಮಕ್ಕಳಿಗೋಸ್ಕರ ಜೀವನವನ್ನೇ ಮುಡಿಪಾಗಿಟ್ಟು ಮಕ್ಕಳ ಏಳಿಗೆಯನ್ನು ನೋಡಬೇಕಾದ ಕಾಲದಲ್ಲಿ ಕೆಂಚೇಗೌಡರ ಅಕಾಲಿಕ ಮರಣದಿಂದ ಅಧೀರಳಾದ ಗೌದ್ರಪಶ್ಷಿ ಲಕ್ಷ್ಮಕ್ಕ ತಾನು ಸಹ ಕೆಂಚೇಗೌಡರ ಜೊತೆಗೆ ಪ್ರಯಾಣ ಹೊರಟಿದ್ದು ಎಂತಹ ವಿಪರ್ಯಾಸ.

—ಎಂ. ಟಿ. ರಮಾನಂದ ರೆಡ್ಡಿ, ಚಿತ್ರದುರ್ಗ

## ದೇವಲೋಕದ ಪಾರಿಜಾತವೆ...

‘ದೇವಲೋಕದ ಪಾರಿಜಾತವೆ’ (ಶ್ರೀಕೃಷ್ಣಪ್ರಸಾದ್ ಎಸ್. ಡಿ. 2) ಲೇಖನ ಓದುತ್ತಿದ್ದ ಹಾಗೆ ನನಗೆ ನನ್ನ ಬಾಲ್ಯದ ನೆನಪು ಮರುಕಳಿಸಿತು. ನನ್ನ ತವರು ಮನೆಯು ಬೆಂಗಳೂರಿನ ಮಲ್ಲೇಶ್ವರ ಬಡಾವಣೆಯಲ್ಲಿದೆ. ನಮ್ಮ ತಂದೆಯವರಿಗೆ ನಾವು ಆರು ಜನ ಹೆಣ್ಣುಮಕ್ಕಳು. ಪಾರಿಜಾತ ಪುಷ್ಪದಲ್ಲಿ ಆರು ದಳಗಳಿರುವುದರಿಂದ ನಮ್ಮ ತಂದೆಯವರು ಮನೆಗೆ ‘ಪಾರಿಜಾತ’ವೆಂದು ಹೆಸರಿಟ್ಟಿದ್ದರು. ಮನೆಯ ಮುಂದುಗಡೆ ಒಂದು ಪಾರಿಜಾತ ವೃಕ್ಷವೂ ಇತ್ತು. ಗಿಡದ ಕೆಳಗಡೆ ಬೀಳುತ್ತಿದ್ದ ಹೂವಿನ ಹಾಸನ್ನು ನಾನು ಮರೆಯುವುದೇ ಇಲ್ಲ.

—ಶ್ಯಾಮಲಾ ಸತ್ಯ, ಬೆಂಗಳೂರು

## ಉರಗ ರಕ್ಷಕ ಅಫ್ಸರ್ ಹುಸೇನ್

‘30 ವರ್ಷ, 30,000 ಹಾವು!’ (ಈರಣ್ಣ ಬೆಂಗಾಲಿ, ಡಿ.2) ಎಂಬ ಹೆಸರಿನ, ರಾಯಚೂರಿನ ಅಫ್ಸರ್ ಹುಸೇನ್ ಅವರಿಗೆ ಹಾವುಗಳ ಬಗ್ಗೆ ಇರುವ ಕಾಳಜಿ ಕುರಿತ ಲೇಖನ ಬಹಳವೇ ಕುತೂಹಲಕಾರಿಯಾಗಿದೆ. ಮಕ್ಕಳಿಗೆ ಈ ವಿಚಾರದ ಬಗ್ಗೆ ಅರಿವು ಅತೀ ಅಗತ್ಯ. ಲೇಖಕರು ಮಲೆನಾಡಿನಲ್ಲಿ ಸಾಮಾನ್ಯವಾಗಿ ಕಂಡುಬರುವ ಮಂಡಲದ ಹಾವು ಮತ್ತು ಕಾಳಿಂಗ ಸರ್ಪ ಬಯಲು ಸೀಮೆಯಲ್ಲಿ ಕಂಡು ಬರುವ ಬಗ್ಗೆ ಒಂದಿಷ್ಟು ಮಾಹಿತಿ ನೀಡಿದ್ದರೆ ಸೂಕ್ತವಾಗುತ್ತಿತ್ತು.

—ರಾಜೀವ್ ಎನ್. ಮಾಗಲ್, ಸಕಲೇಶಪುರ

ಅಫ್ಸರ್ ಹುಸೇನ್, ಹಾವುಗಳ ಸಂರಕ್ಷಣೆಯಲ್ಲಿ ತೊಡಗಿದ್ದಾರೆ ಎಂದು ಓದಿ ಆಶ್ಚರ್ಯವಾಯಿತು. ಹಾವುಗಳನ್ನು ಕಂಡರೆ ಸಾಯಿಸುವವರೇ ಹೆಚ್ಚು. ಆದರೂ, ಹಾವುಗಳನ್ನು ಹಿಡಿದು ಮನೆಯಲ್ಲಿ ಇರಿಸಿಕೊಂಡದ್ದಲ್ಲದೆ, ಅದನ್ನು ಸುರಕ್ಷಿತವಾಗಿ ಕಾಡಿಗೆ ಬಿಡುವಾಗ ಜನರಿಗೆ ಅದರ ಬಗ್ಗೆ ಹೆಚ್ಚಿನ ಅರಿವು ಮೂಡಿಸುತ್ತಾರೆ. ಪರಿಸರದ ಬಗ್ಗೆ ಅವರಿಗೆ ಇರುವ ಕಾಳಜಿ ನಿಜಕ್ಕೂ ಮೆಚ್ಚುವಂತದ್ದು. ಈ ಉರಗ ಪ್ರೇಮಿಯ ಮಾರ್ಗದರ್ಶನದಿಂದ ಪರಿಸರ ಪ್ರೇಮಿಗಳು ಹೆಚ್ಚಾಗಲಿ.

—ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

## ಅರಿವು ಮೂಡಿಸುವ ಬರಹ



‘ಮಕ್ಕಳ ಕೈಗೆ ಪತ್ರಿಕೆ ಕೊಡಿ’ (ಸ್ವಯಂಪ್ರಭಾ, ಡಿ. 2) ಎಂಬ ಶೀರ್ಷಿಕೆಯ ‘ಪಾಲನೆ ಪೋಷಣೆ’ಯಲ್ಲಿ ಪ್ರಕಟವಾದ ಲೇಖನ ಅರ್ಥಪೂರ್ಣವಾಗಿ ಮೂಡಿ ಬಂದಿದೆ. ಇಂದಿನ ಮಕ್ಕಳಲ್ಲಿ ಪತ್ರಿಕೆ ಓದುವ ಹವ್ಯಾಸ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ ಇದೆ. ಕೇಳಿದರೆ, ‘ನಾವು ಮೊಬೈಲ್‌ನಲ್ಲಿಯೇ ಪತ್ರಿಕೆ ನೋಡುತ್ತೇವೆ’ ಎನ್ನುತ್ತಾರೆ. ಆದರೆ ಮೊಬೈಲಿನಲ್ಲಿ ನೋಡುವುದಕ್ಕಿಂತ ಪತ್ರಿಕೆಯನ್ನು ಕೈಯಲ್ಲಿ ಹಿಡಿದು ಓದಿದರೇ ಏನೋ ಸಮಾಧಾನ, ತೃಪ್ತಿ. ಮಕ್ಕಳು ಪತ್ರಿಕೆ ಓದುವುದರಿಂದ ಆಗುವ ಪ್ರಯೋಜನಗಳನ್ನು ಲೇಖನ ಎಳೆ ಎಳೆಯಾಗಿ ಬಿಡಿಸಿ ಹೇಳಿದೆ.

—ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರ್

ಅತ್ಯಂತ ಉಪಯುಕ್ತ ಲೇಖನ, ಶ್ಲಾಘನೀಯ ಕೂಡ. ನಾವಿಬ್ಬರು ಹಿರಿಯ ನಾಗರಿಕರು. ನಮ್ಮನೆಗೆ ಎರಡು ಪತ್ರಿಕೆ ಬರುತ್ತೆ. ಪೇಪರ್‌ನ ಪ್ರತೀ ಕಾಲಂಗಳನ್ನು ಕೂಲಂಕಷವಾಗಿ ಗಮನಿಸಿ ನೋಡಿ, ಉಪಯುಕ್ತ ಮಾಹಿತಿಗಳನ್ನು ಕತ್ತರಿಸಿಟ್ಟು ದಿನಾಂಕ ನಮೂದಿಸಿಡುವ ಅಭ್ಯಾಸ. ಹಾಗೆ ಮೊಮ್ಮಗನಿಗೆ ಕನ್ನಡ ಪರಿಚಯ ಮಾಡುವ ಸಲುವಾಗಿ ವಯಸ್ಸಿಗನುಸಾರವಾದ ಮಾಹಿತಿ, ಕಥೆಗಳನ್ನು ಅವನಿಗೆ ಕಳಿಸುವ ಪರಿಪಾಟವಿಟ್ಟುಕೊಂಡಿದ್ದೇವೆ.

—ಮಧುರ ಸುಬ್ರಹ್ಮಣ್ಯ, ಬೆಂಗಳೂರು

ಲೇಖನ, ಕಳೆದು ಹೋಗಿದ್ದ ಅಪರೂಪದ ಮಾಣಿಕ್ಯವನ್ನು ತಂದು ಕೊಟ್ಟಂತೆ ಇದೆ. ಹೌದು, ಶಾಲಾ ಸಮಯದ ವಿದ್ಯಾರ್ಥಿ ಜೀವನದ ಪ್ರತಿ ಬೆಳಗಿನ ಪ್ರಮುಖ ಸುಂದರ ಸಮಯವನ್ನು ಒಮ್ಮೆಲೇ ನೆನಪಿಗೆ ತಂದಿದೆ. ಪ್ರತಿದಿನ ಒಬ್ಬರ ಸರತಿಯಂತೆ ದಿನಪತ್ರಿಕೆಯಲ್ಲಿನ ಪ್ರಮುಖ ಸುದ್ದಿಗಳ ಸಾಲುಗಳನ್ನು, ಅದಕ್ಕೆಂದೇ ಇಟ್ಟಿದ್ದ ಪುಟ್ಟ ಪುಸ್ತಕದಲ್ಲಿ ಬರೆದುಕೊಂಡು ಶಾಲಾ ಪ್ರಾರ್ಥನೆ ಆದ ನಂತರ ಶಾಲಾ ಮಕ್ಕಳೆಲ್ಲರಿಗೂ ತಿಳಿಯುವಂತೆ ಗಟ್ಟಿಯಾಗಿ ಓದುತ್ತಿದ್ದದ್ದು ನೆನಪಿಗೆ ಬಂದು ಕಣ್ಣಾಲಿಗಳು ತೇವಗೊಂಡವು.

—ನಿರುಕ್ತಾ

ಲೇಖನವು ಪತ್ರಿಕಾ ಓದಿನ ಲಾಭದ ನೂರಕ್ಕೆ ನೂರು ಸತ್ಯದ ವಿಚಾರಗಳನ್ನು ತಿಳಿಹೇಳಿದೆ. ಇಂದಿನ ಮಕ್ಕಳು ಪತ್ರಿಕಾ ಓದಿನಿಂದ ವಿಮುಖರಾಗುತ್ತಿದ್ದಾರೆ. ದೇಶ, ರಾಜ್ಯ, ಜಿಲ್ಲೆಗಳ ವಿದ್ಯಮಾನಗಳು ಅವರ ಅರಿವಿಗೆ ಬರುವುದೇ ಇಲ್ಲ. ಪತ್ರಿಕೆಯ ಓದು ಶಿಕ್ಷಣದ ಒಂದು ಭಾಗ ಎಂಬುದನ್ನು ನಾವು ಅರಿಯಬೇಕು. ಲೇಖಕರು ಹೇಳಿದಂತೆ ಮಕ್ಕಳ ಕೈಗೆ ಪತ್ರಿಕೆಗಳನ್ನು ಕೊಡಬೇಕು. ಇದರ ಓದು ಪ್ರತಿದಿನದ ಪರಿಪಾಠ ವಾಗಬೇಕು. ಮೊಬೈಲ್ ಮತ್ತು ಟೀವಿಗಳಲ್ಲಿ ಲಭಿಸದ ಜ್ಞಾನ ಪತ್ರಿಕೆಗಳಲ್ಲಿ ಅಡಕವಾಗಿದೆ.

—ರಮೇಶ್ ರಾವ್, ಕೈಕಂಬ

ಲೇಖನ ಬಲು ಇಷ್ಟವಾಯಿತು. ನಾನು ಮೈಸೂರಿಗೆ ಬಂದ ಹೊಸತರಲ್ಲಿ ನಮ್ಮ ರಾಮಕೃಷ್ಣ ನಗರದ ಸುತ್ತಮುತ್ತ ಮುಂಜಾನೆಯ ವಾಯುವಿಹಾರಕ್ಕೆ ಹೋಗುತ್ತಿದ್ದೆ ಅಲ್ಲಿ ಪಾರಿಜಾತದ ಹೂಗಳ ಘಂ ಎನ್ನುವ ಸುವಾಸನೆ ಬೆಳಗಿನ ಶುಭಾಶಯ ಹೇಳುತ್ತಿದ್ದವು. ಈ ಪಾರಿಜಾತ ಹೂವಿನ ವಿಶೇಷ ಹಾಗೂ ಅದರ ಪುರಾಣ ಕಥನವನ್ನು ನನ್ನ ಮಗಳಿಗೆ ತಿಳಿಸಿಕೊಡಲು ಖುಷಿ ಅನಿಸುತ್ತದೆ.

—ಅನಿತಾ ಕೆ.ಎಂ.

## ಭಳಾರೆ ಮಹಾದೇವ ವೇಳಿಪ!

‘ಭಳಾರೆ ಮಹಾದೇವ ವೇಳಿಪ’ (ಅಕ್ಷತಾ ಕೃಷ್ಣಮೂರ್ತಿ, ಡಿ.2) ಅವರಂತಹ ಹಿರಿಯ ಜೀವವನ್ನು ಪರಿಚಯಿಸಿದ ಲೇಖಕಿಗೆ ಧನ್ಯವಾದಗಳು. ದಟ್ಟ ಕಾಡಿನೊಳಗೆ ಸಹಜವಾಗಿ ಬದುಕುತ್ತಾ, ನಾಗರಿಕ ಜಗತ್ತಿಗೂ ಒಳಿತು ಮಾಡುತ್ತಿರುವ ಮಹಾದೇವ ವೇಳಿಪರಿಗೂ ನಮನಗಳು. ನಮ್ಮೊಡನೆಯೇ ಇದ್ದರೂ ಕೀರ್ತಿಪ್ರಚಾರ ಬಯಸದೆ ಎಲೆಮರೆಕಾಯಿಯ ಹಾಗೆ ಹಲವರಿದ್ದಾರೆ. ರಾಯಚೂರಿನ ಉರಗಪ್ರೇಮಿ ಅಫ್ಸರ್ ಹುಸೇನ್ ಕೂಡ ಅಂಥವರಲ್ಲೊಬ್ಬರು. ಇವರನ್ನೆಲ್ಲಾ ಪರಿಚಯಿಸಿದ ‘ಸುಧಾ’ಗೆ ಪ್ರೀತಿಯ ಧನ್ಯವಾದಗಳು.

—ವಸುಂಧರಾ ಕದಲೂರು



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in